International Journal of Kannada Research 2023; 9(1): 84-90

International Journal of Kannada Research
www.kannadajournal.com

ISSN: 2454–5813
IJKR 2023; 9(1): 84-90
© 2023 IJKR
www.kannadajournal.com
Received: 14-11-2022
Accepted: 16-12-2022

**ಡಾ. ವಿನಾಯಕ ನಾಮಣ್ಣವರ**
ಸಹಾಯಕ ಪ್ರಾಧ್ಯಾಪಕ ಭಾಷಾ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು, ಕರ್ನಾಟಕ, ಭಾರತ

**Corresponding Author:**
**ಡಾ. ವಿನಾಯಕ ನಾಮಣ್ಣವರ**
ಸಹಾಯಕ ಪ್ರಾಧ್ಯಾಪಕ ಭಾಷಾ ವಿಭಾಗ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಚಾಮರಾಜಪೇಟೆ, ಬೆಂಗಳೂರು, ಕರ್ನಾಟಕ, ಭಾರತ

# ತಾಂಬೂಲ ಒಂದು ಚಿಂತನೆ

**ಡಾ. ವಿನಾಯಕ ನಾಮಣ್ಣವರ**

**ಪೀಠಿಕೆ**

ಸನಾತನ ಭಾರತೀಯ ಸಂಪ್ರದಾಯದಲ್ಲಿ ತಾಂಬೂಲವು ನಿತ್ಯ ಮತ್ತು ನೈಮಿತ್ತಿಕ ಸಂದರ್ಭಗಳಲ್ಲಿ ಕಡ್ಡಾಯವಾಗಿ ಬಳಸಲ್ಪಡುವ ವಸ್ತು. ತಾಂಬೂಲವನ್ನು ಕೆಲವರು ನಿತ್ಯ ಭೋಜನದ ನಂತರ ಸೇವಿಸಿದರೆ, ಇನ್ನು ಕೆಲವರಿಗೆ ತಾಂಬೂಲ ಚರ್ವಣ ಚಟವಾಗಿರುತ್ತದೆ. ಕೆಲವರು ಕೇವಲ ವಿಳ್ಯೆದೆಲೆಯನ್ನು ಸೇವಿಸಿದರೆ, ಮತ್ತೆ ಕೆಲವರು ಅಡಿಕೆ, ಏಲಕ್ಕಿ, ಲವಂಗ, ಸುಣ್ಣ ಸೇರಿಸಿ ಸೇವಿಸುತ್ತಾರೆ. ಇನ್ನೂ ಕೆಲವರು ಎಲೆ, ತಂಬಾಕು, ಸುಣ್ಣ ಸೇರಿಸಿ ಸೇವಿಸುವರುಂಟು. ಹೀಗೆ ತಮಗೆ ಅರಿವಿಲ್ಲದೆ, ಅರಿವು ಇದ್ದಂತೆ ತಾಂಬೂಲ ಚರ್ವಣ ಮಾಡುವುದು ಸರಿಯೇ? ತಾಂಬೂಲದಲ್ಲಿ ಯಾವ ಪದಾರ್ಥಗಳಿರಬೇಕು, ಅವುಗಳ ಪ್ರಮಾಣ, ಲಕ್ಷಣ, ಸೇವಿಸುವ ಸಮಯ, ಯಾರು ಸೇವಿಸಬೇಕು? ಯಾರು ಸೇವಿಸಬಾರದು? ಹೇಗೆ ಸೇವಿಸಬೇಕು, ಅದರ ಪ್ರಯೋಜನ ಮತ್ತು ಮಹತ್ವವನ್ನು ತಿಳಿಸುವುದು ಇಂದು ಅವಶ್ಯಕವಾಗಿದೆ. ಈ ರೀತಿಯಾದ ಶಾಸ್ತ್ರೀಯ ಹಿನ್ನೆಲೆಯನ್ನು ಹೊಂದಿರುವ ತಾಂಬೂಲ ಚರ್ವಣದ ಜಿಜ್ಞಾಸೆ ಹೀಗಿದೆ.[1]

ತಾಂಬೂಲವಿದು ಸಂಸ್ಕೃತ ಸಾಹಿತ್ಯ ಗ್ರಂಥಗಳಲ್ಲಿ ಈ ರೀತಿಯಾದ ಅರ್ಥವನ್ನು ಹೊಂದುತ್ತದೆ. 'ಅ' ಕಾರಂತ ಪುಲ್ಲಿಂಗ ರೂಪದಲ್ಲಿರುವಾಗ, ಮತ್ತು ತಾಂಬೂಲೀ ಎಂದು ಸ್ತ್ರೀ ಲಿಂಗದಲ್ಲಿರುವಾಗ ವೀಳ್ಯೆದೆಲೆಯೆಂದೂ ಅರ್ಥವಾಗುತ್ತದೆ. "ತಾಂಬೂಲಂ" ಎಂದು ನಪುಂಸಕ ರೂಪದಲ್ಲಿರುವಾಗ ಅಡಿಕೆ ಎಂದರ್ಥವಾಗುತ್ತದೆ.

ತಾಂಬೂಲೋ ನಾವಲ್ಯಾಂ ಸ್ತ್ರೀ ಕ್ರಮುಕೇ ತು ನಪುಂಸಕಮ್‌ತಾಂಬೂಲೀ ನಾಮ್ವ್ಯಾ ಸ್ತ್ರೀ ಕ್ರಮುಕೇತು ನಪುಂಸಕಮ್ (ಮೇದಿನಿಕೋಶ) ಸಿದ್ಧಾಂತ ಕೌಮುದಿಯಲ್ಲಿ ತಾಂಬೂಲ ಶಬ್ದದ ವ್ಯುತ್ಪತ್ತಿಯನ್ನು ಹೀಗೆ ತಿಳಿಸಲಾಗಿದೆ;

**ಖಿಜಿಪಿಂಜಾದಭ್ಯ ಊರೋಲ ಚೌ (ಸೂ.ಕ್ರ 4734) ಮತ್ತು ತಮೇರ್ಬುಗ್ ವೃದ್ಧಿಶ್ಚ (ಸೂ.ಕ್ರ. 4735–2) ತಮು ಗ್ಲಾನೌಬುಗ್ ದೀರ್ಘತ್ಚಂಚ' ಎಂದು ಮೇಲಿನ ಸೂತ್ರಗಳ ವ್ಯಾಖ್ಯಾನಾನುಸಾರವಾಗಿ ಮತ್ತು ತಾಮ್ಯತಿ – ತಮು (ಕಾಂಕ್ಷಾಯಾಂ) 'ಕ್ಷಿಪ್' ಬೋಲತಿ–ಬುಲ (ಮಜ್ಜನೇ) 'ಕ' (3.1.135) ತಾಮ್ ಚಾಸೌ ಬೋಲಶ್ಚ' ಪೃಷೋಂ। ಎಂಬ ಸೂತ್ರಗಳ ಅನುಸಾರವಾಗಿ ತಾಂಬೂಲ ಎಂಬ ರೂಪವನ್ನು ಪಡೆಯುತ್ತದೆ.[3]**

**ತಾಂಬೂಲ ಪದಾರ್ಥ ವಿಚಾರ**

ತಾಂಬೂಲವೆಂದರೆ ವಿಳ್ಯೆದೆಲೆ, ಅಡಿಕೆ, ಸುಣ್ಣ, ಕಾಚು, ಲವಂಗ, ಖದಿರ, ಕೊಬ್ಬರಿ, ಏಲಕ್ಕಿ, ಸೇರಿಸಿ ಮಾಡಿದ "ವೀಡಾ" ಎಂದು ಎಲ್ಲರಿಗೂ ವಿದಿತವಾದ ವಿಷಯ. ಹಾಗಾದರೆ ತಾಂಬೂಲದಲ್ಲಿರುವ ಪದಾರ್ಥಗಳ ಸ್ವರೂಪವನ್ನು ಭೋಪದೇವನೆಂಬುವನು ಹೀಗೆ ತಿಳಿಸುತ್ತಾನೆ.[4]

ತಾಂಬೂಲಪೂಗಂ ಖದಿರಂ ಲಂವಂಗಂ
ಜಾತೀ ಫಲೈಲಾತ್ವಚಪತ್ರಿಕಾದ್ಯಾಃ ।
ಸನ್ನಾಗವಲ್ಲೀದಲ ಚೂರ್ಣಯುಕ್ತಂ
ಬಾತಾಮಕಂಕೋಲ ಮೃಗಸ್ತೃಣೋತ್ಥಮ ॥
ಬೋಪದೇವಃ (ತಾಂಬೂಲ ಮಂಜರೀ 54)

ಅಡಿಕೆ, ಕಾಚು, ಲವಂಗ, ಜಾತೀಫಲ, ಏಲಕ್ಕೀ, ದಾಲಚಿನ್ನಿ, ಪತ್ರ, ಉತ್ತಮ ವೀಳ್ಯೆದೆಲೆ, ಸುಣ್ಣ, ಬಾದಾಮು ಬೀಜ, ಕಂಕೋಲ, ಮೃಗಕಸ್ತೂರೀ, ಮತ್ತು ತೃಣಕಸ್ತೂರೀ, ಕರ್ಪೂರ, ಕೇಸರ ಇವುಗಳಿಂದ

ಸಹಿತವಾದ ಪದಾರ್ಥಗಳಿಗೆ ತಾಂಬೂಲವೆಂದು, ಇಂಥ ಶ್ರೇಷ್ಠವಾದ ಪದಾರ್ಥಗಳಿಂದು ಸಹಿತವಾದ ತಾಂಬೂಲವನ್ನು ದೇವರಿಗೆ ಸಮರ್ಪಿಸಬೇಕು.[5]

ತಾಂಬೂಲ ಕಲ್ಪಸಂಗ್ರಹವು ಕೆಲವರು ಹದಿನಾರು ದ್ರವ್ಯಗಳನ್ನು, ಮತ್ತೇ ಕೆಲವರು ಹದಿಮೂರು ದ್ರವ್ಯಗಳನ್ನು ಕೂಡಿದ ತಾಂಬೂಲವು ಹೊಂದಿರಬೇಕೆಂದು ತಿಳಿಸುತ್ತದೆ.

**ತಾಂಬೂಲದಲ್ಲಿರುವ ಗುಣ ಮತ್ತು ಪ್ರಯೋಜನಗಳು**

ಹೀಗೆ ಹದಿನಾರು ಉತ್ತಮವಾದ ದ್ರವ್ಯಗಳನ್ನು ಹೊಂದಿರುವ ತಾಂಬೂಲವನ್ನು ಸೇವಿಸಿದರೆ ಅದು ಕೇವಲ ಮುಖಶುದ್ಧಿಯೂ ಅಥವಾ ಮುಖಾಲಂಕಾರವು ಕಾಮಪ್ರಚೋದಕವೋ ಆಗಿರದೆ, ಇದು ದೇಹದಲ್ಲಿ ತ್ರಿದೋಷಗಳ (ವಾತ, ಪಿತ್ತ, ಕಫಾ) ಅಸಮತೋಲನವನ್ನು ನಿವಾರಿಸಿ ಶಾರೀರಿಕ ಸಮತೋಲನವನ್ನು ಕಾಪಾಡುತ್ತದೆ. ತಾಂಬೂಲ ಚರ್ವಣದಿಂದ ಹದಿಮೂರು ಮುಖ್ಯ ಪ್ರಯೋಜನಗಳವೆಯೆಂದು 'ಧನ್ವಂತರೀ' ಗ್ರಂಥ ಹೀಗೆ ವಿವರಿಸಿದೆ.

> ತಾಂಬೂಲಂ ಕಟುತಿಕ್ತ ಮುಷ್ಣಮಧುರಂ ಕ್ಷಾರಂ ಕಷಾಯಾನ್ವಿತಂ।
> ವಾತಾಘ್ನಂ ಕಫನಾಶನ ಕ್ರಿಮಿಹರಂ ದುರ್ಗಂಧಿನಿರ್ಣಾಶನಮ್ ॥
> ವಕ್ತ್ರಸ್ಯಾಭರಣಂ ಮುಖ ವಿಶುದ್ಧೀಕರಣಂ ಕಾಮಾಗ್ನಿ ಸಂದೀಪನಂ ।
> ತಾಂಬೂಲಸ್ಯ ಸಖೇ ತ್ರಯೋದಶಗುಣಾಃ ಸ್ವರ್ಗೇಽಪಿ ತೇ ದುರ್ಲಭಾಃ ॥ (ತಾಂಬೂಲಮಂಜರಿ)

ತಾಂಬೂಲವು, ಒಗರು, ಖಾರ, ಹುಳಿ, ಸಿಹಿ, ಉಪ್ಪು ಮತ್ತು ಕಹಿ ಹೀಗೆ ಆರು ರಸಗಳಿಂದ ಯುಕ್ತವಾಗಿದ್ದು ಇದು ವಾತ, ಪಿತ್ತ, ಕಫಗಳ ನಾಶಕವಾಗಿರುತ್ತದೆ. ತಾಂಬೂಲವು ಮುಖ ಹಾಗೂ ದೇಹದೊಳಗಿನ ಕ್ರಿಮಿಗಳನ್ನು ನಾಶಪಡಿಸುತ್ತದೆ ಹಾಗೂ ಮುಖದ ದುರ್ಗಂಧವನ್ನು ಕಳೆಯುತ್ತದೆ. ಇದು ಮುಖವೆಂಬ ಕಮಲಕ್ಕೆ ಭೂಷಣವಿದ್ದಂತೆ, ಇದು ಮುಖ(ಬಾಯಿಯ) ಶುದ್ಧಿಕಾರಕವು ಹೌದು. ದೇಹದಲ್ಲಿ, ಮನದಲ್ಲಿ, ಕಾಮಭಾವನೆಯ ಉದ್ದೀಪಕವೂ ಆಗಿದೆ. ಹೀಗೆ ತಾಂಬೂಲವು ಹದಿಮೂರು ಗುಣಗಳು ಅಥವಾ ಪ್ರಯೋಜನಗಳನ್ನು ಹೊಂದಿರುವ ಇದರ ಸೇವನೆಯೇ ಒಂದು ಮಹತ್ ಲಾಭ. ಇದರ ಸ್ನೇಹಕ್ಕೆ ಸಿಲುಕಿದ ವ್ಯಕ್ತಿಗೆ ಸ್ವರ್ಗದ ಸುಖದ ಅವಶ್ಯಕತೆಯೇ ಇಲ್ಲವೆಂಬುದು ಕವಿಯ ಅಭಿಪ್ರಾಯವಾಗಿದೆ.[7]

ಕೇವಲ ತಾಂಬೂಲ ಚರ್ವಣದಿಂದ ಈ ಮೇಲಿನ ಪ್ರಯೋಜನಗಳು ಮಾತ್ರವಲ್ಲ (ಸರ್ವಕುಷ್ಠಾಪಹಾರ) ಕುಷ್ಠರೋಗದಪರಿಹಾರ, ಮಧುಮೇಹದ ಪರಿಹಾರ, (ದಂತದಾರ್ಢ್ಯ ಉಪಕಾರೋ) ಹಲ್ಲುಗಳಿಗೆ ದಾರ್ಢ್ಯತೆಯನ್ನು ತಂದು ಕೊಡುತ್ತದೆ. ಮತ್ತು ಶಾಙಧರ ಪದ್ಧತಿ–1416 ಈ ಗ್ರಂಥದಲ್ಲಿ ತಾಂಬೂಲದ ಪ್ರಯೋಜನವನ್ನು ಹೀಗೆ ತಿಳಿಸಿರುತ್ತಾರೆ.

> ತಾಂಬೂಲಂ ಮುಖರೋಗನಾಶ ನಿಪುಣಂ ಸಂವರ್ಧನಂ ತೇಜಸೋ
> ನಿತ್ಯಂ ಜಾಠರವಹ್ನಿ ವೃದ್ಧಿಜನನಂ ದುರ್ಗಂಧ ದೋಷಾಪಹಮ್
> ವಕ್ತ್ರಾಲಂಕರಣಂ ಪ್ರಹರ್ಷಜನನಂ
> ವಿದ್ವನ್ನ ಪ್ರಾಗ್ರೇರಣೇ ।
> ಕಾಮಸ್ಯಾಯತನಂ ಸಮುದ್ಭವಕರಂ ಲಕ್ಷ್ಮ್ಯಾ: ಸುಖಸ್ಯಾಸ್ಪದಮ್ ॥

ತಾಂಬೂಲವು ಬಾಯಿಯ ರೋಗಗಳನ್ನು ಕಳೆಯುವಲ್ಲಿ ಅತಿ ಶ್ರೇಷ್ಠವಾದ ಸಾಧನವಾಗಿದೆ. ಇದು ದೇಹದ ಕಾಂತಿಯನ್ನು ಹೆಚ್ಚಿಸುತ್ತದೆ. ನಿತ್ಯವೂ ಜಠರಾಗ್ನಿಯನ್ನು ಉದ್ದೀಪನಗೊಳಿಸುತ್ತದೆ. ಬಾಯಿಯ ದುರ್ಗಂಧವನ್ನು ನಿವಾರಿಸುತ್ತದೆ. ರಣಾಂಗಣದಲ್ಲಿ ತಾಂಬೂಲ ಸೇವನೆಯಿಂದ ಹರ್ಷ ಮತ್ತು ಉತ್ಸಾಹಗಳುಂಟಾಗುತ್ತದೆ. ಸಂಪತ್ತನ್ನು ಮತ್ತು ಸುಖವನ್ನು ತಂದು ಕೊಡುತ್ತದೆ.[8]

ಹೀಗೆ ಅನೇಕ ಪ್ರಯೋಜನಗಳನ್ನು ಹೊಂದಿರುವ ತಾಂಬೂಲ ಚರ್ವಣಕ್ಕೆ ಪ್ರಮಾಣ ಮತ್ತು ವಿಧಿ ವಿಧಾನಗಳನ್ನು ಅನೇಕ ಗ್ರಂಥಕಾರರು ತಿಳಿಸುತ್ತಾರೆ.

**ತಾಂಬೂಲ ಚರ್ವಣದ ಪ್ರಮಾಣ ಮತ್ತು ವಿಧಿವಿಧಾನ**

ಅಂದು ಸಾಯಂಕಾಲದ ಸಮಯ, ಮದುವೆಯ ಸಮಾರಂಭ ನಾನಾ ತರಹದ ಅಡುಗೆ. ಅದನ್ನು ಸ್ವೀಕರಿಸಲು ಕೂಡಿದ ಜನಸಮೂಹ. ದ್ವಾರದ ಬಳಿ ತಾಂಬೂಲದ ತಟ್ಟೆ, ಭೋಜನ ಮಾಡಿದ ಜನರ ದೃಷ್ಟಿಯನ್ನು ಇದರೆಡೆಗೆ ಕೆಲವರನ್ನು ಆಯಸ್ಕಾಂತದಂತೆ ಸೆಳೆದರೆ ಈ ತಾಂಬೂಲೀ, ಎಲ್ಲರ ಮನವನ್ನು ಸೆಳೆಯುವ ಮನೋಜ್ಞೀ. ಇದರರ್ಥ ತನ್ನನ್ನು ಸರಿಯಾಗಿ ಭೋಗಿಸಲೆಂದು ಆದರೆ ಕೆಲವೇ ಕ್ಷಣದಲ್ಲಿ ಈ ತಾಂಬೂಲೀಯ ಅಪೇಕ್ಷೆ ನುಚ್ಚನೂರಾಯಿತು. ಹೇಗೆ? ಕೆಲವರು ಆಗಮಿಸಿ ತಟ್ಟೆಯಲ್ಲಿರುವ ಒಂದು ಎಲೆಯನ್ನು ತೆಗೆದು ಅದಕ್ಕೆ ಅಡಕೆ ಸೇರಿಸಿ ಸ್ವೀಕರಿಸಿದರು. ಮತ್ತೇ ಕೆಲವು ಎಲೆಯ ವಾಟ ಮಾಡಿ ಬೇಸತ್ತ ಎಲೆಯ ಸಂಪರ್ಕವೇ ಬೇಡವೆಂದು ವೀಳ್ಯೆದೆಲೆಯನ್ನು ಬಿಟ್ಟು ಕೇವಲ ಅಡಿಕೆ ಸೇವಿಸಿದರು. ಇನ್ನೂ ಕೆಲವರು ಕೇವಲ ಎಲೆ ಮತ್ತು ಸುಣ್ಣ ಸೇರಿಸಿದರೆ, ಮತ್ತೆ ಕೆಲವರು ಎಲೆ, ಸುಣ್ಣ, ಅಡಿಕೆ, ಲವಂಗ, ಏಲಕ್ಕಿ ಸೇರಿಸಿ ಸ್ವೀಕರಿಸಿದರು ಹೀಗೆ ಅನೇಕರು ತಮಗೆ ತೋಚಿಯೂ ತೋಚದಂತೆ ಈ ತಾಂಬೂಲ ಚರ್ವಣದ ಸ್ವೀಕಾರವನ್ನು ಇವತ್ತು ನಾವೆಲ್ಲರೂ ಕಾಣುವ ಪ್ರತ್ಯಕ್ಷ ದೃಷ್ಟಾಂತ ಇದು ಸರಿಯೇ? ತಾಂಬೂಲದಲ್ಲಿನ ಎಲೆಯ ಪ್ರಮಾಣ, ಅಡಿಕೆಯ ಪ್ರಮಾಣ, ಲವಂಗ, ಏಲಕ್ಕಿ ಹೀಗೆ ಅನೇಕ ಪದಾರ್ಥಗಳನ್ನು ಒಂದು ಸರಿಯಾದ ವ್ಯವಸ್ಥೆಯಲ್ಲಿ ಸೇರಿಸಿ ಸ್ವೀಕರಿಸುವುದು ಉತ್ತಮ. ಅದು ಹೇಗೆ ಎಂದರೆ? ವಸಿಷ್ಠರು ತಾಂಬೂಲದಲ್ಲಿ ಬಳಸುವ ಎಲೆಗಳ ಪ್ರಮಾಣ ಕುರಿತು ಮತ್ತು ಯಾರಿಗೆ ಎಷ್ಟು ಎಲೆಗಳನ್ನು ಕೊಡಬೇಕೆಂದು ತಿಳಿಸುತ್ತಾರೆ.[9]

> ಗುರೂಣಾಂ ದೇವತಾನಂ ಚ ದ್ವಾತ್ರಿಂಸತ್ಪರ್ಣವೀಟಿಕಾ
> ಚತುರ್ವಿಂಶತಿ ಭೂಪಾನಾಂ ಜಾಮಾತ್ರೂಣಾಂ ದಶಾಷ್ಟಕಮ್ ॥
> ಸ್ತ್ರೀಣಾಂ ದ್ವಾದಶಪರ್ಣಾನಿ ಕವೀನಾಂ ದಶಪಂಚಕಮ್
> ಸರ್ವೇಷಮಷ್ಟ ಪರ್ಣಾನಿ ಸಾಮಾನ್ಯಂ ತುರ್ಯಮುಚ್ಯಯತೇ ॥
> ಏಕಪರ್ಣಂ ದ್ವಿಪರ್ಣಂ ವಾ ತ್ರಿಪರ್ಣಂ ನ ಕದಾಚನ ।
> ರಿಪೂಣಾಂಚ ಪ್ರದಾತವ್ಯ ಷಟ್ಪರ್ಣಂ ತು ಪ್ರಯತ್ನತಃ ॥

ಗುರುಗಳಿಗೆ ಮತ್ತು ದೇವತೆಗಳಿಗೆ 32 ವೀಳ್ಯೆದೆಲೆಗಳಿಂದ ತಯಾರಿಸಿದ ತಾಂಬೂಲವನ್ನು ಸಮರ್ಪಿಸಬೇಕು. ರಾಜರಿಗೆ 24 ವೀಳ್ಯೆದೆಲೆಗಳನ್ನು, ಅಳಿಯಂದಿರಿಗೆ 18 ವೀಳ್ಯೆದೆಲೆಗಳನ್ನು ಕೊಡಬೇಕು. ಸ್ತ್ರೀಯರಿಗೆ 12 ವೀಳ್ಯೆದೆಲೆಗಳನ್ನು ಪಂಡಿತರಿಗೆ 15 ವೀಳ್ಯೆದೆಲೆಗಳನ್ನು, ಉಳಿದವರಿಗೆ 8 ವೀಳ್ಯೆದೆಲೆಗಳನ್ನು ಕೊಡಬೇಕು. ಇದುವರೆಗೆ ಸಂಖ್ಯಾನಿರ್ಬಂಧವಿಲ್ಲ ಎಲ್ಲರಿಗೂ 4 ವೀಳ್ಯೆದೆಲೆಗಳನ್ನು ಕೊಡುವುದು ಸರ್ವ ಸಾಧಾರಣವಾದ ಕ್ರಮವೆಂದು ತಿಳಿಯಲ್ಪಡುತ್ತದೆ. ಒಂದಾಗಲಿ ಅಥವಾ ಮೂರು ವೀಳ್ಯದೆಲೆಗಳನ್ನು ಎಂದಿಗೂ ಕೊಡಕೂಡದು ಮತ್ತು ಸ್ವೀಕರಿಸಬಾರದು. ಶತೃಗಳಿಗೆ ಮಾತ್ರ ಪ್ರಯತ್ನ ಪೂರ್ವಕ 6 ಎಲೆಗಳಿಂದ ಯುಕ್ತವಾದ ತಾಂಬೂಲವನ್ನು ಕೊಡಬೇಕು.[10] ಹೀಗೆ ಅಡಿಕೆಯ ಪ್ರಮಾಣವನ್ನು

ಸಹಿತ ಸ್ಮರತಿಮಂಜರೀಯಲ್ಲಿ ವಿವರಿಸಿರುತ್ತಾರೆ. ಎರಡು ಅಡಿಕೆ ಬೆಟ್ಟವನ್ನು ಕತ್ತರಿಸಿ ಹಾಕಿ ಮಾಡಿದ ತಾಂಬೂಲವನ್ನು ಯಾರಿಗೆ ದಾನ ಮಾಡಬಾರದು. ಮತ್ತು ತಿನ್ನಲೂ ಬಾರದು. ಇಂಥ ತಾಂಬೂಲ ಸೇವನೆ(ದಾನಂ ತು ನಿಷ್ಫಲಂ ಪ್ರೋಕ್ತಂ ಖಾದ ಪುಣ್ಯನಾಶನಮ್) ಪುಣ್ಯನಾಶಕವೆಂದೂ, ಒಂದು ಅಥವ ಮೂರು ಅಡಿಕೆ ಬೆಟ್ಟಗಳ ದಾನ ಮತ್ತು ಸೇವನೆ ಉತ್ತಮವಾದದ್ದು (ವತ್ಸರಾರ್ಧಾತ್ವರಂ ಪೂಗಂ ಕಠಿನಂ ತು ಸುಪಾಚಿತಮ್) ಗಿಡದಿಂದ ಹರಿದು ಅರ್ಧ ವರ್ಷದ ಮೇಲಾಗಿರುವ ಕಠಿಣವಾಗಿರುವ ಪಕ್ವವಾಗಿರುವ ಮತ್ತು ಒಳಗೆ ರಕ್ತ ವರ್ಣದ ಅಡಿಕೆಯನ್ನು ತಿನ್ನಬೇಕು. ಮತ್ತು ಹೆಬ್ಬೆರಳಿನಿಂದ ಪಾತ್ರೆಯಲ್ಲಿರುವ ಸುಣ್ಣವನ್ನು ತೆಗೆದು ಅದನ್ನು ವೀಳ್ಯದೆಲೆಯ ಪುಷ್ಪಭಾಗದಲ್ಲಿ ಲೇಪಿಸಿ ತಿನ್ನಬೇಕು ಸುಣ್ಣದ ಪ್ರಮಾಣ ಜಾಸ್ತಿಯಾಗಿ ಬಾಯಿಗೆ ದಾಹ(ಪಟ್ಟರೆ)ವಾದರೆ ಅದರ ಉಪಶಮನಕ್ಕಾಗಿ ತಾಂಬೂಲ ಮಂಜರೀಯಲ್ಲಿ ಹೀಗೆ ತಿಳಿಸಿದ್ದಾರೆ. ತಿಳಿಯದೆಯೇ ತಾಂಬೂಲದಲ್ಲಿ ಸುಣ್ಣವು ಹೆಚ್ಚಾಗಿ ಪುರುಷನ ಬಾಯಿ ಸುಡಲು ಪ್ರಾರಂಭಿಸಿದರೆ ಆಗ ಬಾಯಿಯಲ್ಲಿ ಸಕ್ಕರೆ, ಎಣ್ಣೆ ಅಥವಾ ಹುಳಿಅಂಬಲಿ, ಗಂಜಿ ಇವುಗಳನ್ನು ಹಾಕಿಕೊಳ್ಳುವುದರಿಂದ ಉರಿಯಶಮನವಾಗುವುದು, (ಸಿತಾತೈಲ ಸಾವೀರ ಕೈಸ್ತ ನಿವೃತ್ತಿ : ಪೃಥಕ್ ತಸ್ಯ – ಗಂಡೂಷ ಏಮೋಪದಿಃಷ್ಪ)11 ಮತ್ತು ಇಂಥ ಸಮಯದಲ್ಲಿ ಬಾಯಿ ಮುಕ್ಕಳಿಸುವುದು ಒಂದು ಪ್ರತ್ಯೇಕ ಉಪಾಯವೆಂದು ತಿಳಿಸಲ್ಪಟ್ಟಿದೆ. ತಾಂಬೂಲದಲ್ಲಿ ಬಳಸುವ ಸುಣ್ಣ ಬೆಟ್ಟದಲ್ಲಿ ಸಿಗುವ, ನೀರಿನ ಮೂಲಗಳಿಂದ ಲಭಿಸುವ, ಸುಣ್ಣದ ಹರಳನ್ನು ಅಥವಾ ಶಿಂಪುಗಳಿಂದ ತಯಾರಿಸಿದ ಸುಣ್ಣವನ್ನು ಉಪಯೋಗಿಸಬೇಕು. ಮತ್ತು ಮಲಯ ಪರ್ವತದ ಶಿಖರಗಳಲ್ಲಿ ಬೆಳೆದ ಲತೆಗಳಿಂದ ಸುರಿಯುವ ರಸದಿಂದ ಉತ್ಪನ್ನವಾಗುವ, ಪಾಕ ಮಾಡದಿರುವ (ಅಪಕ್ವವಾದ) ಉಜ್ವಲವಾದ ಕರ್ಪಣವು ಸ್ಪಟಿಕದಂತೆ ಸ್ವಚ್ಛವಾಗಿರುತ್ತದೆ. ಈ ತರಹದ ಕರ್ಪೂರವನ್ನು ತಾಂಬೂಲದಲ್ಲಿ ಬಳಸಬೇಕು.12

### ವೀಳ್ಯದ ಎಲೆಯ ಸ್ವರೂಪ

ವೀಳ್ಯದೆಲೆಯ ಅಗ್ರಭಾಗದಲ್ಲಿ ಆಯಸ್ಸು ಮತ್ತು ಮೂಲಭಾಗದಲ್ಲಿ ಯಶಸ್ಸು. ಮಧ್ಯಭಾಗದಲ್ಲಿ ಲಕ್ಷ್ಮಿಯ ಸನ್ನಿಧಾನವಿರುವುದರಿಂದ ವೀಳ್ಯದೆಲೆಯ ಅಗ್ರ ಮತ್ತು ಮೂಲ ಭಾಗಗಳನ್ನು ವರ್ಜಿಸಬೇಕು. ವೀಳ್ಯದೆಲೆಯ ತುಂಬ ಸೇವಿಸಿದರೆ ವ್ಯಾಧಿಯುಂಟಾಗುವುದು. ಅಗ್ರಭಾಗದ ಸೇವನೆಯಿಂದ ಪಾಪವುಂಟಾಗುವುದು. ಮೂಲಭಾಗವನ್ನು ತಿಂದರೆ ಬುದ್ಧಿಹ್ರಾಸವಾಗುವುದು.[13]
ತಾಂಬೂಲವನ್ನು ಸೇವಿಸಿದಾಗ ಮೊದಲ ಬಂದಿರುವ ರಸವು ವಿಷಕ್ಕೆ ಸಮಾನ ಅದಕ್ಕೆ ಅದನ್ನು ಉಗುಳಬೇಕು. ಎರಡನೇ ಅಗಿತದ ರಸದ ಸೇವನೆಯಿಂದ ದೇಹದಲ್ಲಿ ಅತಿಯಾದ ಉಷ್ಣತೆಯನ್ನು ತಂದುಕೊಡುವುದರಿಂದ ಅದನ್ನು ಉಗುಳಬೇಕು.

> ಆದೌ ವಿಷೋಪಮಂ ಪೀತಂ ।
> ದ್ವಿತೀಯಂ ಭೇದಿದುರ್ಜರಮ್ ॥
> ತೃತೀಯಾದಿ ತುಸಾತವ್ಯಂ ।
> ಸುಧಾತುಲ್ಯಂ ರಸಾಯನಮ್ ॥
> (ತ್ರಿಮಲ್ಲಭಟ್ಟವಿರಚಿತ ಬೃಹದ್ಯೋಗತರಂಗಿಣೀ (ಸಪ್ತಮರಂಗ) 54)

ಮೂರನೇಯ ಬಾರಿಯ ರಸವು ಅಮೃತ ಸಮಾನವಾದದ್ದು ಅದನ್ನು ಸ್ವೀಕರಿಸಬೇಕು. ಕೆಲವರು ತಾಂಬೂಲದಲ್ಲಿ ಸುಣ್ಣವನ್ನು ಬಳಸದೆ ಇರುವವರಿಗೆ ಮರಣಕಾಲದಲ್ಲಿ ಹರಿಯ ಸ್ಮರಣೆಯನ್ನು ಮಾಡಲು ಸಮರ್ಥರಾಗುವುದಿಲ್ಲ ಮತ್ತು ಮುಂದಿನ ಹತ್ತು ಜನ್ಮಗಳಲ್ಲಿ ದರಿದ್ರನಾಗುತ್ತಾನೆ. ಅದಕ್ಕಾಗಿ ಐದು ನಿಷ್ಕ ಅಡಕೆ, ನಾಲ್ಕು ವೀಳ್ಯದೆಲೆಯೊಂದಿಗೆ ಸುಣ್ಣಸೇರಿಸಿ ಹದಿನಾರು ಪದಾರ್ಥಗಳಿಂದ ಸಹಿತ ತಾಂಬೂಲವು ಚರ್ವಣಕ್ಕೆ ಯೋಗ್ಯವಾಗುವುದು. ತಾಂಬೂಲದಲ್ಲಿ ಅಡಿಕೆಯ ಪ್ರಮಾಣ ಅಧಿಕವಾದರೆ ವಿರಾಗುವುಂಟಾಗುವುದು ಸುಣ್ಣದ ಪ್ರಮಾಣವು ಅಧಿಕವಾದರೆ ಬಾಯಿಯಲ್ಲಿ ಸುಟ್ಟ ದುರ್ಗಂಧವುಂಟಾಗುವುದು. ವೀಳೆದೆಲೆಗಳು ಅಧಿಕವಾಗಿದ್ದರೆ ಸುಗಂಧವುಂಟಾಗುವುದು.
ಹೀಗೆ ತಾಂಬೂಲ ಧರ್ಮವು ಒಂದು ವಿಧಿ ವಿಧಾನಗಳಿಗೆ ಒಳಪಟ್ಟು ಸ್ವೀಕರಿಸಿದರೆ ದೇಹಕ್ಕೆಯಾವ ತರಹದ ಬಾಧಕವೂ ಇಲ್ಲ. ಆದರೆ ಅತಿ ಸೇವಿಸಿದರೆ ಆರೋಗ್ಯದಲ್ಲಿ ಅನೇಕ ವಿಕಾರಗಳಾಗುವುದುಂಟು. ಎಂದು ಅಶ್ವಲಾಯನರು ಹೀಗೆ ತಿಳಿಸುತ್ತಾರೆ.

> ಪಾಂಡುತ್ವಂ ದಂತ ದೌರ್ಬಲ್ಯಮಕ್ಷಿರೋಗಂ ಬಲಕ್ಷಯಮ್
> ಕರೋತಿ ಮುಖರೋಗಾಂಶ್ಚ ತಾಂಬೂಲಮತಿ ಸೇವನಾನಿ
> ಆಯುಃ ಪ್ರಜ್ಞಾಬಲಂ ರೇತಃ ಶಕ್ತಿಬುದ್ಧಿವಿನಾಶನಮ್
> ಸಕೃದ್ವರ್ಯಾ
> ಜಡತಂದ್ರಾ ತಾಂಬೂಲಾಧಿಮತಿ ಭಕ್ಷಣೇ"
> (ತಾಂಬೂಲಕಲ್ಪಸಂಗ್ರಹ 53–54)

ತಾಂಬೂಲ ಸೇವನೆಯ ಅತಿಯಾದರೆ ದೇಹದಲ್ಲಿ ಪಾಂಡತ್ವ, ಹಲ್ಲುಗಳಲ್ಲಿ ದೌರ್ಬಲ್ಯ, ಕಣ್ಣು ಸರಿಯಾಗಿ ಕಾಣಿಸದೆ ಇರುವುದು, ದೇಹದಲ್ಲಿನ ವೀರ್ಯ ಕ್ಷೀಣತೆಯನ್ನು ಹೊಂದುವುದು. ಬಾಯಿ ರೋಗಗಳು ಮತ್ತು ಆಯಷ್ಯ ಪ್ರಜ್ಞಾ, ಬಲ, ರೇತಸ್ಸು, ಬುದ್ಧಿಯೇ ಮುಂತಾದವುಗಳು ತಾಂಬೂಲದ ಅತಿ ಸೇವನೆಯಿಂದ ನಾಶವನ್ನು ಹೊಂದುತ್ತವೆ. ಹೀಗೆ ತಾಂಬೂಲ ಚರ್ವಣವು ಒಂದು ಮಿತಿಯಲ್ಲಿದ್ದರೆ ಸುಖ, ಅಮಿತವಾದರೆ ದುಃಖ

### ತಾಂಬೂಲ ಚರ್ವಣಕ್ಕೆ ಅಧಿಕಾರಿಗಳು

ಅಪ್ರಜ್ಞಾ ವಂತಿಕೆಯ ಸ್ಥಿತಿಯ ಅಮಲಿನಲ್ಲಿರುವ ಇಂದಿನ ಸಮಾಜದಲ್ಲಿ ತಿಳಿದು ನಡೆಯುವ, ತಿಳಿಸುವ ತಾಳ್ಮೆಯನ್ನು ಹೊಂದದ ಜನಾಂಗದಲ್ಲಿ ಈ ತಾಂಬೂಲ ಚರ್ವಣವು ಸರ್ವೇ ಸಾಮಾನ್ಯವಾಗಿದೆ. ಚಿಕ್ಕ ಮಕ್ಕಳಿಂದ ಹಿಡಿದು ವೃದ್ಧರವರೆಗೆ, ಸಮಯದ ಅರಿವಿಲ್ಲದೆ ತಾಂಬೂಲವನ್ನು ಸ್ವೀಕರಿಸುವುದು ಸಹಜವಾಗಿದೆ. ಆದರೆ ಎಲ್ಲದಕ್ಕೂ ಒಂದು ವಯೋಮಿತಿ ಇದ್ದಂತೆ ತಾಂಬೂಲ ಚರ್ವಣಕ್ಕೂ ವಯೋಮಿತಿಯು ಮತ್ತು ಕಾಲಮಿತಿಯು ಇದೆ. ಅದು ಹೇಗೆ ಎಂಬುದೇ ತಾಂಬೂಲ ಚರ್ವಣದ ಅಧಿಕಾರಿಗಳ ಜಿಜ್ಞಾಸೆ

> ತಾಂಬೂಲಂ ನೈವ ಸೇವೇತ ನ ವಿರಕ್ತೋ ಬುಭಕ್ಷಿತಃ
> ಕ್ಷತಾಸ್ರಪಿತ್ತೀ ಕ್ಷೀರಾಶೀಕ್ಷೀಣೋ ರೂಕ್ಷ್ಯಕ್ಷಿರೋಗ್ಯಪಿ
> ವಿಷಮೂರ್ಛೋಪವಾಸಾರ್ತೋ ಮೇಹಿ ಪಾಂಡ್ವಾಮಯೀ ಕ್ಷಯೀ
> ಭೂತಾಪಸ್ಮಾರಕುಷ್ಠಾತಿಸಾರೀ ಕೃಚ್ಛ್ರೀಚ ಹೃದ್ಗದೀ ॥
> ಆಶ್ವಲಾಯನರು

ತಾಂಬೂಲ ಸೇವನೆಯನ್ನು ನಿಷೇಧಿಸಲ್ಪಟ್ಟವರು ಕುರಿತು ಅಶ್ವಲಾಯನರು ಹೀಗೆ ತಿಳಿಸುತ್ತಾರೆ.
ಸುವಿರಕ್ತನೂ, ಹಸಿವೆಯಿಂದ ಬಳಲದವನು, ರಕ್ತಸ್ರಾವ ಆದವನು, ವಾತಪಿತ್ತವನ್ನು ಹೊಂದಿದವನು, ಕ್ಷೀರವನ್ನು ಸ್ವೀಕರಿಸುವವನು, ಮೂರ್ಛಿತನು, ಉಪವಾಸದಿಂದ ಬಳಲಿದವನು,

ಮಧುಮೇಹಿಯೂ, ಪಾಂಡುರೋಗಿಗಳು, ಕ್ಷಯರೋಗಿಗಳು, ಹೃದಯರೋಗಿ, ಅತಿಸಾರವಾದವನು, ಹೀಗೆ ಅನಾರೋಗ್ಯದಿಂದ ಪೀಡಿತರಾದ ಇವರೆಲ್ಲರೂ ತಾಂಬೂಲ ಚರ್ವಣಕ್ಕೆ ಅನಧಿಕಾರಿಗಳು. ಹಾಗೆಯೇ ವಶಿಷ್ಟರ ಪ್ರಕಾರ ತಾಂಬೂಲ ಭಕ್ಷಣೆಯ ನಿಷೇಧ ಈ ರೀತಿಯಾಗಿದೆ.

ಅಶ್ವಲಾಯನರ ಪ್ರಕಾರ
ಯತೇಶ್ಚ ವಿಧವಾಯಾಶ್ಚ ದೀಕ್ಷಿತಸ್ಯ ವಟೋರಪಿ ।
ತಾಂಬೂಲಭಿಕ್ಷಣಂ ವರ್ಜ್ಯಂ ಮೈಥುನಂ ಚ ವಿಶೇಷತಃ ॥

ಯತಿಗಳು, ವಿಧವೆಯರು, ಬ್ರಹ್ಮಚಾರಿಗಳು (ವಟುಗಳು), ಯಜ್ಞದಲ್ಲಿ ತೊಡಗಿರುವ ಬ್ರಾಹ್ಮಣ (ಧೀಕ್ಷಿತನು), ಇವರೆಲ್ಲರಿಗೂ ತಾಂಬೂಲ ಚರ್ವಣವನ್ನು ನಿಷೇಧಿಸಲ್ಪಟ್ಟಿದೆ. ಕೇವಲ ಗ್ರಹಸ್ಥನಿಗೆ ಮಾತ್ರ ತಾಂಬೂಲ ಚರ್ವಣಕ್ಕೆ ಅಧಿಕಾರವೆಂದು ವಶಿಷ್ಟರು ತಿಳಿಸುತ್ತಾರೆ.[18] ಆದರೆ ಇವತ್ತು ಅನೇಕ ಮದುವೆಯ ಸಮಾರಂಭಗಳಲ್ಲಿ ನೋಡಿದರೆ ಎರಡು ವರ್ಷದ ಮಗುವಿನಿಂದ ಈ ತಾಂಬೂಲ ಸೇವನೆಯು ಪ್ರಾರಂಭವಾಗಿದೆ. ಮಗು, ತಂದೆ ತಾಯಿ ತಿನ್ನುವ ಎಲೆ ಅಡಿಕೆಯನ್ನು ಕೇಳಿದರೆ, ಶಾಸ್ತ್ರದ ಅರಿವಿಲ್ಲದೆ ಎಲೆಯಲ್ಲಿ ಅಡಿಕೆ ಮುಂತಾದವುಗಳನ್ನು ಹಾಕಿ ಸಣ್ಣದಾದ ವೀಡಾಕಟ್ಟಿ ಚಿಕ್ಕ ಮಕ್ಕಳ ಬಾಯಿಗೆ ಇಡುತ್ತಾರೆ. ಜವಾಬ್ದಾರಿಯುತರಾದ ತಂದೆತಾಯಿಗಳೇ ಹೀಗೆ ನಡೆದುಕೊಂಡರೆ ಯಾರು ಹೊಣೆ? ಇವತ್ತು ತಾಂಬೂಲ ಚರ್ವಣ ಮಾಡಿದ ಮಗು ನಾಳಿದ್ದೂ ಗುಟಕಾ ಚರ್ವಣ ಮಾಡುವುದಿಲ್ಲವೆಂಬುದೂ ಹೇಗೆ ತಾನೆ ಹೇಳುವುದು? ಇದರಿಂದ ನಾಲಗೆ ದಪ್ಪವಾಗಿ ಚಿಕ್ಕಮಕ್ಕಳಿಗೆ ಉಚ್ಚಾರ ಸರಿಯಾಗಿ ಆಗದೆ ಇರಬಹುದು. ಅಥವಾ ಬುದ್ಧಿ ಮಾಂಧ್ಯನಾಗಬಹುದು. ಮತ್ತು ವಿಕೃತ ಕಾಮಿಯಾಗಬಹುದು. ಇವೆಲ್ಲ ಕಾರಣಗಳಿಂದಲೆ ಬ್ರಹ್ಮಚಾರಿಗಳಿಗೆ ತಾಂಬೂಲ ಚರ್ವಣವನ್ನು ನಿಷೇಧಿಸಲಾಗಿದೆ.

**ವಾನಪ್ರಸ್ಥಸ್ಯ ಪಕ್ವಾನ್ನಂ ತಾಂಬೂಲಂ ಬ್ರಹ್ಮಚಾರಿಣಾಮ್ ದದ್ಯಾತ್ ದಾತಾಚನರಕಂ ವ್ರಜೇತ್**

ಹೀಗಿದ್ದರೂ ಯಾರಾದರೂ ವಾನಪ್ರಸ್ಥಾಶ್ರಮಿಗಳಿಗೆ ಪಕ್ವಾನ್ನ ಹಾಕಿದರೆ ಮತ್ತು ಬ್ರಹ್ಮಚಾರಿಗಳಿಗೆ ತಾಂಬೂಲವನ್ನು ಕೊಟ್ಟರೆ, ಕೊಟ್ಟ ದಾತನು ನರಕಕ್ಕೆ ಹೋಗುತ್ತಾರೆಂದು ಅಶ್ವಲಾಯನರು ತಿಳಿಸುತ್ತಾರೆ. ಆದ್ದರಿಂದ ಯೋಗ್ಯರಾದ ಗ್ರಹಸ್ಥಾಶ್ರಮಿಗಳು ಮಾತ್ರ ತಾಂಬೂಲ ಚರ್ವಣಕ್ಕೆ ಅಧಿಕಾರಿಗಳು.

ಗೃಹಸ್ಥಾಶ್ರಮಿಗಳಿಗೆ ಅಧಿಕಾರವಿದೆ ಎಂದ ಮಾತ್ರಕ್ಕೆ ಯಾವುದೋ ಸಂದರ್ಭದಲ್ಲಿ, ಯಾವಾಗ ಬೇಕಾದರೂ ನಾನು ತಾಂಬೂಲವನ್ನು ಸೇವಿಸುತ್ತೇನೆಂದರೆ ಅದು ತಪ್ಪು ಅದಕ್ಕೊಂದು ಕಾಲ ದೇಶದ ಮಿತಿಯೂ ಇದೆ.

ವ್ರತೇ ಶ್ರಾದ್ಧ ದಿನೇ ತೀರ್ಥೇ ಸಂಧ್ಯಯೋ ರ್ಗುರು ಸನ್ನಿಧೌ
ತಾಂಬೂಲಭಕ್ಷಣಂ ಯತ್ತತ್ ತುಲ್ಯಂ ಗೋಮಾಂಸ ಭಕ್ಷಣಮ್
ದೇವಾಲಯೇ ಸ್ಮಶಾನೇ ಚ ನದೀ ಸಂತರಣೇ ತಥಾ ।
ಕ್ಷಯಾಶೌಚೇ ಚ ಮಧ್ಯಾಹ್ನೇ ತಾಂಬೂಲಂ
ಆಪೇ ಹರಿಕಥಾಲಾಪೇ ಸ್ವಾಧ್ಯಾಯೇ ಗುರುಸನ್ನಿಧೌ
ತಾಂಬೂಲ ಚರ್ವಣಂ ಕೃತ್ವಾ ಕಾರವಂ ನರಕಂ ವ್ರಜೇತ್ ॥
ನಷ್ಟೇ ದ್ವೀಪೆಶಯಾನೇ ವಾ ತಲನೆವನ ಸನ್ನಿಧೌ
ಅಶ್ವತ್ಥಬಿಲ್ವ ಮೂಲೇಚನಚ ತಾಂಬೂಲ ಭಕ್ಷಣಮ್

ಯಾವುದಾದರೂ ವ್ರತವನ್ನು ಮಾಡುವಾಗ, ಶ್ರಾದ್ಧದಿನದಲ್ಲಿ ತೀರ್ಥಕ್ಷೇತ್ರದಲ್ಲಿ, ಸಂಧ್ಯಾವಂದನೆಯ ಕಾಲದಲ್ಲಿ ಗುರುಗಳ ಸನ್ನಿಧಿಯಲ್ಲಿರುವಾಗ, ಮತ್ತು ದೇವಾಲಯದಲ್ಲಿ ಸ್ಮಶಾನದಲ್ಲಿ, ನದಿದಾಟುವಾಗ, ಅಶೌಚಾಲಯದಲ್ಲಿ, ಮಧ್ಯಾಹ್ನ ಸಮಯದಲ್ಲಿ ಜಪಮಾಡುವಾಗ, ಹರಿಕಥಾಲಾಪ ನಡೆದಿರುವಾಗ, ಮನೆಯಲ್ಲಿ ದೀಪವು ಶಾಂತವಾದಾಗ ಮಲಗುವಾಗ, ತುಳಸೀವನ ಸನ್ನಿಧಿಯಲ್ಲಿರುವಾಗ, ಅಶ್ವತ್ಥ ಮತ್ತು ಬಿಲ್ವ ವೃಕ್ಷಗಳ ಬುಡದಲ್ಲಿರುವಾಗ ತಾಂಬೂಲವನ್ನು ಸೇವಿಸಕೂಡದು. ಒಂದು ವೇಳೆ ಸ್ವೀಕರಿಸಿದರೆ ಗೋಮಾಂಸ ಭಕ್ಷಣ ಮಾಡಿದಷ್ಟು ಪಾಪವಿದೆಯೆಂದು ತಿಳಿಸುತ್ತಾರೆ. ಹೀಗಾಗಿ ನಿಷೇಧಿಸಲ್ಪಟ್ಟ ಕಾಲ, ದೇಶಗಳನ್ನು ಬಿಟ್ಟು ತಾಂಬೂಲ ಚರ್ವಣವನ್ನು ಮಾಡುವುದು ಶಾಸ್ತ್ರ ಸಮ್ಮತವಾಗಿದೆ.

ಈ ರೀತಿಯಾಗಿ ವಿವಿಧ ಶಾಸ್ತ್ರೀಯ ಹಿನ್ನೆಲೆಯನ್ನು ಹೊಂದಿರುವ ತಾಂಬೂಲದ ಉತ್ಪತ್ತಿಯ ಕುರಿತು ಸ್ಕಂದಪುರಾಣದ ನಾಗರ ಖಂಡ ಎರಡನೇ ಅಧ್ಯಾಯದಲ್ಲಿ ಒಂದು ರೋಚಕವಾದ ಕಥೆಯಿದೆ.

**ತಾಂಬೂಲದ ಇತಿಹಾಸ**

ಪೂರ್ವದಲ್ಲಿ ದೇವದಾನವರು ಅಮೃತಪಾಪ್ತಿಗಾಗಿ ಸಮುದ್ರವನ್ನು ಮಥನಮಾಡುವಾಗ, ಧನ್ವಂತರಿಯು ಅಮೃತದ ಕಲಶವನ್ನು ತೆಗೆದುಕೊಂಡು ಮೇಲೆ ಬಂದಾಗ ಅದನ್ನು ಪಡೆಯಲು ದೇವದಾನವರಲ್ಲಿ ಕಲಹ ಉಂಟಾಯಿತು. ಇದನ್ನರಿತ ಶ್ರೀ ಹರಿಯು ಮೋಹಿನೀ ರೂಪವನ್ನು ಧರಿಸಿ ಅಮೃತವನ್ನು ದೇವತೆಗಳ ಸಾಲಿಗೆ ಸಿಗುವಂತೆ ಮಾಡಿದ ದೇವತೆಗಳು ಅಮೃತವನ್ನು ಸ್ವೀಕರಿಸಿ ಉಳಿದ ಅಮೃತದ ಕಲಶವನ್ನು ಐರಾವತವನ್ನು ಕಟ್ಟಿಹಾಕಿದ ಮನೆಯಲ್ಲಿ ಬಚ್ಚಿಟ್ಟರು.[20]

**ಅಹರ್ನಿಶಂ ಮದಸ್ರಾವೀ ಕರೀಂದ್ರ**

ಸೋಽಪಿ ಸಂಸ್ಥಿತಃ
ತತಪ್ರಭಾವ್ಯೆ ಪ್ರಭಿನ್ನಃ ಸ ಪೀಯೂಷಸ್ಯಶಮಂಡಲಃ
ತತೋ ವಲ್ಲೀ ಸಮುತ್ಪನ್ನಾ ತಸ್ಮಾಚ್ಚೈವ ಕಮಂಡಲೋ ।
ತತ್ರಾಲಾನ ಸಮಾರೂಢಾ ವೃದ್ಧೀಂ ಚ ಪರಮಾಂ ಗತಾ
ತದುದ್ಭುವಾನಿ ಪತ್ರಾಣಿ ಗ್ರಿಹೀತ್ವಾ ಸುರತ್ತಮಾ
ಅಪೂರ್ವಾಣಿ ಸುಗಂಧೀನಿ ಮತ್ವಾ ತೇ ಭಿಕ್ಷಯಂತಿ ಚ ॥
ಅಥ ಧನ್ವಂತರಿ ರ್ವೈದ್ಯಃ ಸ್ವಬುಧ್ಧ್ಯಾ ಪೃಥವೀಪತೇ
ನಾಗಾಲಾನೇ ಯತೋ ಜಾತಾ ನಾಗವಲ್ಲೀ ಭವಿಷ್ಯ
(ಸ್ಕಂಧಪುರಾಣ ನಾಗರಖಂಡ 2 – 48)

ಬಚ್ಚಿಟ್ಟ ಆ ಸ್ಥಳದಲ್ಲಿ ಐರಾವತನ ಮದರಸವು ಆ ಕಲಶದಲ್ಲಿ ಬಿದ್ದು ಅಮೃತದ ಕಲಶ ಭಾಗವಾಗಿ ಅದರಲ್ಲಿರುವ ರಸವುಕ್ಕಿ ಎಲ್ಲವೂ ಭೂಮಿಯನ್ನು ಸೇರಿತು. ಈ ಸುಗಂಧೀ ರಸದಿಂದ ಒಂದು ಬಳ್ಳಿ ಅಲ್ಲಿ ಬೆಳೆದು ದೊಡ್ಡದಾಯಿತು. ಐರಾವತವನು ಕಟ್ಟಿದ ಕಂಬವನ್ನು ಸುತ್ತಿಕೊಂಡು ಈ ಬಳ್ಳಿ ಗಗನದೆತ್ತರ ಬೆಳೆಯಿತು. ದೇವತೆಗಳು ಇದನ್ನು ಕಂಡು ತಾಂಬೂಲ ಚರ್ವಣಕ್ಕೆ

ಅನೇಕ ಪದಾರ್ಥಗಳನ್ನು ಸೇರಿಸಿ ಸ್ವೀಕರಿಸಿದರು. ಇದು ನಾಗಾಲಾನೆಯಲ್ಲಿ ಬೆಳೆದ ಪತ್ರವಾದ್ದರಿಂದ ಇದಕ್ಕೆ ನಾಗವಲ್ಲೀ ಎಂದು ಕರೆದರು. ಹೀಗೆ ನಾಗವಲ್ಲಿಗಳ ಸಂಯೋಗದಿಂದ ಹುಟ್ಟಿದ ಪದಾರ್ಥವು ಈ ತಾಂಬೂಲ ಈ ರೀತಿಯಾಗಿ ದೇವಲೋಕದಲ್ಲಿ ಸೃಷ್ಟಿಯಾಯಿತು. ಪುರಾಣಗಳು ತಿಳಿಸುತ್ತವೆ. ಹಾಗೆಯೇ ಈ ತಾಂಬೂಲವು ಭೂಲೋಕಕ್ಕೆ ಬರಲು ಒಂದು ಕಥೆ. ಹಿಂದೆ ವಾಣಿವತ್ಸರಕ ಎಂಬ ರಾಜ ಪ್ರತಿನಿತ್ಯ ಇಂದ್ರನನ್ನು ಭೇಟಿ ಮಾಡಿ ನಮಸ್ಕರಿಸಿ ಬರುತ್ತಿದ್ದನು. ಆದ್ದರಿಂದ ಹರ್ಷಿತನಾದ ಇಂದ್ರದೇವನು ಅವನಿಗೆ ನಾಗವಲ್ಲಿಯ ತಾಂಬೂಲವನ್ನು ಕೊಡುತ್ತಿದ್ದ, ಅದನ್ನು

ಸ್ವೀಕರಿಸಿದರಾಜ ತಾನೂ ತನ್ನ ಲೋಕದಲ್ಲಿ ಈ ನಾಗವಲ್ಲೀಯನ್ನು ಬೆಳೆಸುವ ವಿಚಾರವನ್ನು ಇಂದ್ರನ ಹತ್ತಿರ ತಿಳಿಸಿದನು. ಅದಕ್ಕಾಗಿ ಇಂದ್ರನು ಒಂದು ನಾಗವಲ್ಲಿಯ ಬಳ್ಳಿಯನ್ನು ರಾಜನ ಕೈಯಲ್ಲಿ ಕೊಟ್ಟನು. ರಾಜನು ತನ್ನ ಉದ್ಯಾನವನದಲ್ಲಿ ಇದನ್ನು ಬೆಳೆಸಿದ. ಅಂದಿನಿಂದ ಈ ಭೂಲೋಕದಲ್ಲಿ ನಾಗವಲ್ಲೀಯ ತಾಂಬೂಲದ ಸೃಷ್ಟಿಯಾಯಿತೆಂದು ಪುರಾಣಗಳಿಂದ ವಿವರಿಸಲ್ಪಟ್ಟ ವಿಷಯವಾಗಿದೆ.

**ಶಾಸನಗಳಲ್ಲಿ ತಾಂಬೂಲ**

**(ಡಾ. ಪಿ.ಕೆ. ಗೋಡೆ. ಪುಣೆ ಇವರ ರೆಫರನಿಸಿಸ್‌ಟು ತಾಂಬೂಲ ಇನ್ ಇಂಡಿಯನ್ ಇನ್‌ಸ್ಕ್ರಿಪ್ಷನ್ ಬಿಟ್ವೀನ್ ಎ. ಡಿ 473 ಆ್ಯಂಡ್ 1800 ಎಂಬ ಲೇಖನದಿಂದ ಉದ್ಧ ತ)**

1) ತಾಂಬೂಲ ಮತ್ತು ಅಡಿಕೆ, ಕರ್ಪೂರ, ಮುಂತಾದವುಗಳು ಉಲ್ಲೇಖವು ಅನೇಕ ಶಾಸನಗಳಲ್ಲಿ ಕಂಡುಬರುತ್ತದೆ.
1) ಗುಪ್ತಾ ಶಾಸನಗಳು
2) ಧನಿಕನ ನಾಗರ ಶಾಸನಗಳು
3) ಕನ್ನಡ ಶಾಸನಗಳು
4) ಮರಾಠಿ ಶಾಸನಗಳು

**ಉದಾಹರಣೆಗೆ**

1) ತಾರುಣ್ಯಕಾಂತ್ಯುಪಚಿತೋsಪಿ ಸುವರ್ಣಹಾರ ತಾಂಬೂಲಪುಷ್ಪಿ ವಿಧಿನಾ ಸಮಲಂಕೃತೋಪಿ ನಾರೀಜನಃ ಶ್ರೀಯಮುಪೈತಿ ನ ತಾವದಗ್ರ್ಯಾಂ ಯಾವನ್ನ ಪಟ್ಟಮಯವಸ್ತ್ರಯುಗಾನಿ ಧತ್ತೇ॥
ಗುಪ್ತಾಶಾಸನ, ನಂ. 18 473 A.D
2) ವಕ್ತ್ರಂ ಚಂದ್ರನಿಭಂ ಲಲಾಟಫಲಕೇ ನ್ಯಸ್ತಂ ಲಸಲ್ಲೋಚನಂ
ದತ್ತಾಂಗೇsಪಿ ಜಲಾರ್ದ್ರಕಾ ತನುತರೇ
ತಥಾಪಿ ನ ಹೃತೋಯತ್ಕೋಧರಾಪತಾ ಪೋದ್ಗಮಃ ॥
ವ್ಯಾಲೋಲೋಚನ ಜಲಪ್ಲುತೀಲಾಂಛಿತಾನಿ ।
ತಾಂಬೂಲರಾಗ ರಹಿತಾಧರಭಾಂಜಿ ಯಸ್ಯ
3) ಕೋಪಶ್ಚಕಾರ ವದನಾನ್ಯರಿ ಸುಂದರೀಣಾಮ್॥

**ಧನಿಕನ ನಾಗಾರಶಾಸನ 685 A.D**

ಹೀಗ ಅನೇಕ ಶಾಸನಗಳಲ್ಲಿ ತಾಂಬೂಲದ ಉಲ್ಲೇಖಗಳನ್ನು ಕಾಣಬಹುದಾಗಿದೆ.

**ತಾಂಬೂಲ ಚರ್ವಣದ ಕೆಲವು ನಿಯಮಗಳು**

ರಡು ಅಡಿಕೆಗಳಿಂದ ಕೂಡಿದ ತಾಂಬೂಲವನ್ನು ಇನ್ನೊಬ್ಬರಿಗೆ ಕೊಡಬಾರದು ಮತ್ತು ತಿನ್ನಬಾರದು. ಒಂದು ವೇಳೆ ಕೊಟ್ಟರೆ ಆ ತಾಂಬೂಲದಾನವು ನಿಷ್ಫಲವಾಗುವುದು ಮತ್ತು ತಿಂದರೆ ಪುಣ್ಯ ನಾಶವಾಗುವುದು. ಒಂದು ಅಥವಾ ಮೂರು ಅಡಿಕೆಯು ದಾನ ಹಾಗೂ ಸೇವನೆ ಅತ್ಯಂತ ಶ್ರೇಷ್ಠವಾಗಿದೆ.

1) ಅಡಿಕೆ – ಗಿಡದಿಂದ ತೆಗೆದ ಆರು ತಿಂಗಳು ಕಳೆದಿರುವ; ಕಠಿಣವಾಗಿರುವ ಚೆನ್ನಾಗಿ ಪಕ್ವವಾದ ಮತ್ತು ಒಳಗೆ ಅರಗಿನಿಂತಿರುವ ಅಡಿಕೆಯನ್ನು ತಿನ್ನಬೇಕು.
2) ಸುಣ್ಣದ ಕಲ್ಲಿನಿಂದ ತಯಾರಿಸಿದ ಸುಣ್ಣವನ್ನು ಸ್ವೀಕರಿಸಬೇಕು.
3) ಬೆಳಿಗ್ಗೆ 3 ಅಡಿಕೆ ಭೋಜನಾನಂತರ ನಾಲ್ಕು ಅಡಿಕೆ, ರಾತ್ರಿ 5 ಅಡಿಕೆಗಳನ್ನು ಬಳಸಬೇಕು.

**ಸುಣ್ಣ ಹಚ್ಚುವ ಕ್ರಮ**

ತರ್ಜನ್ಯಾ ಚೂರ್ಣಮಾದಾಯ ತಾಂಬೂಲಂ ನ ತು ಖಾದಯೇತ್ ಯದಿ ವಾ ಖಾದಯೇತ್ ಮೂಢೋ ಕೌರವಂ ನರಕಂ ವ್ರಜೇತ್‌ಕನಿಷ್ಠಾ ಅನಾಮಿಕಾ ಮಧ್ಯಾ ತರ್ಜನ್ಯಂಗುಷ್ಠಯೋಗತಃ । ಶೋಕೋ ಹಾನಿಸ್ತಥಾ ಮೃತ್ಯುಃ । ವ್ಯಾಸಸ್ಮತಿ
ತೋರು ಬೆರಳಿನಿಂದ ಮತ್ತು ಕಿರುಬೆರಳೂ, ಉಂಗುರಬೆರಳು, ಮಧ್ಯದ ಬೆರಳು, ಇವುಗಳನ್ನು ಸುಣ್ಣ ಹಚ್ಚುವ ಕಾರ್ಯಕ್ಕೆ ಬಳಸಬಾರದು ಅದರಿಂದ ನರಕ ಮತ್ತು ಮೃತ್ಯು ಉಂಟಾಗುತ್ತದೆ.

ಅಂಗುಷ್ಠ ಚೂರ್ಣಸಂಯುಕ್ತ ಪರ್ಣಪೃಷ್ಠೇ ತು ಲೇಪನಮ್
ತತ್ಪತ್ರಂ ಖಾದಯೇತ್ರೇನ ಸೋಮಪಾನಂ ದಿನೇ ದಿನೇ

ಹೆಬ್ಬೆರಳಿನಿಂದ ವೀಳದ್ಯೆದೆಲೆ ಸುಣ್ಣವನ್ನು ಹಚ್ಚಿ ಸ್ವೀಕರಿಸಿದರೆ ಅದು ಅಮೃತಸಮಾನವಾಗಿರುತ್ತದೆ.
ಛಿದ್ರವಾಗಿರುವ ವೀಳ್ಯೆದೆಲೆಯನ್ನು ಸ್ವೀಕರಿಸಬಾರದು ಸ್ವೀಕರಿಸಿದರೆ ಏನಾಗುತ್ತದೆಯೆಂಬುದಕ್ಕೆ ವಿವರಿಸುತ್ತಾರೆ ಸ್ವೀಕರಿಸಿದವನಿಗೆ ದಾರಿದ್ರ್ಯ ಬರುತ್ತದೆ.

**ಉಪಸಂಹಾರ**

ಹೀಗೆ ತಾಂಬೂಲ ಚರ್ವಣಕ್ಕೆ ತನ್ನದೆಯಾದ ಶಾಸ್ತ್ರೀಯ ಹಿನ್ನೆಲೆಯನ್ನು ಹೊಂದಿದ ತಾಂಬೂಲ ಸೇವನೆಯ ಇವತ್ತಿನ ಸಮಾಜ ಅದರ ಮೌಲ್ಯವನ್ನು ಕಳೆದು ಮನ ಬಂದಂತೆ ಹವ್ಯಾಸ ಚಟಗಳ ಮೂಲಕ, ನಿಷಿದ್ಧ ಪದಾರ್ಥಗಳೊಂದಿಗೆ ಎಲೆ ಅಡಿಕೆಯನ್ನು ತಿನ್ನುವುದು ಸಹಜವಾಗಿದೆ. ಆದ್ದರಿಂದ ಈ ಲೇಖನದ ಮೂಲಕ ತಾಂಬೂಲದ ಕುರಿತು ಒಂದು ಚಿಕ್ಕ ಚಿತ್ರಣವನ್ನು ಕೊಡಲಾಗಿದೆ. ಅಮೃತದಿಂದ ಕೂಡಿದ ಈ ತಾಂಬೂಲ ಚರ್ವಣವು ಶಾಸ್ತ್ರಬದ್ಧವಾದರೆ ಅದೂ ನಮ್ಮ ಮನಸ್ಸಿಗೂ, ದೇಹಕ್ಕೂ ಆನಂದ. ಅಶಾಸ್ತ್ರೀಯವಾದ ತಾಂಬೂಲ ದೇಹದ ಅನಾರೋಗ್ಯಕ್ಕೆ ನಾಂದಿ. ನಿಮಗೆ ಯಾವುದು ಸರಿ ಅದನ್ನು ಶ್ರೋತೃಗಳೇ ನಿರ್ಣಯಿಸುವುದು.

**ಟಿಪ್ಪಣಿಗಳು**

**1) ತಾಂಬೂಲ ಎಂಬವಿಷಯ ಅನೇಕ ಗ್ರಂಥಗಳಲ್ಲಿ ಉಲ್ಲೇಖವಾಗಿರುತ್ತದೆ.**

**ತಾಂಬೂಲ ಮಂಜರೀ –"ಬರೋಡಾ ಓರಿಯಂಟಲ್ ಲೈಬ್ರರಿ"** ಹಸ್ತಪ್ರತಿ ಕ್ರಮಾಂಕ 115 ವರ್ಗಾಂಗ ಆಯುರ್ವೇದ, ಪುಣೆಯ ಬಂಡಾರ್‌ಕರ್ ಓರಿಯಂಟಲ್ ಲೈಬ್ರರಿ" ಎರಡು ಹಸ್ತಪ್ರತಿಗಳಿವೆ. 223 ಶ್ಲೋಕಗಳಿಂದ ಕೂಡಿದ ಗ್ರಂಥ ಕರ್ತೃ ಯಾರು ಎಂದು ತಿಳಿದಿಲ್ಲ. ಆದರೆ 57 ಶ್ಲೋಕ ಮರಾಠಿಯಲ್ಲಿರುವುದರಿಂದ ಅವನು ಮಹಾರಾಷ್ಟ್ರದವನೆಂದು ತಿಳಿದುಬರುತ್ತದೆ.

**2) ತಾಂಬೂಲ ಕಲ್ಪಸಂಗ್ರಹ** : ಈ ಹಸ್ತಪ್ರತಿಯ 'ಬಂಗಾಲದ ಏಶಿಯಾಟಿಕ ಸೊಸೈಟಿ ಲೈಬ್ರರಿ" ಮತ್ತು "ಭಂಡಾರಕರ ಓರಿಯಂಟಲ್ ರೀಸರ್ಚ್ ಸೆಂಟರ್" ನರಸಿಂಹ ಭಟ್ಟ ವಿರಚಿತ ಗ್ರಂಥವಾಗಿರುತ್ತದೆ. 1 ರಿಂದ 65 ಮತ್ತು 1 ರಿಂದ 40ರವರೆಗೆ ಎರಡು ಭಾಗಗಳಾಗಿ ವಿಂಗಡಿಸಲಾಗಿದೆ.

**ಶಾಙಧರಪದ್ಧತಿ** : ಬೃಹತ್ಸಂಹಿತಾ, ರಾಜನಿಘಂಟು, ಪ್ರಾಣತೋಷಿನೀ, ಭೋಜನ ಕುತೂಹಲ ತ್ರಿಮಲ್ಲಭಟ್ಟನ ಬೃಹದ್ಯೋಗತರಂಗಣೀ
ಮಾನಸೋಲ್ಲಾಸ (ಸೋಮದೇವ, ತಾಂಬೂಲ ಭೋಗ, ಶಿವತತ್ತ್ವರತ್ನಾಕರ (ಬಸವರಾಜ ಕೆಳದಿ)
ಪುರಾಣಗಳಲ್ಲಿ ಸ್ಕಂಧ ಪುರಾಣ (ನಾಗರಖಂಡ), ವಶಿಷ್ಠ, ಆತ್ರೇಯ, ದೇವಲ ಸ್ಮೃತಿಗಳಲ್ಲಿ ಬಂದಿರುವ ತಾಂಬೂಲದ ವಿಚಾರ.

**3) "ಶಬ್ದ ಕಲ್ಪದ್ರುಮ (ಭಾಗ–2 ಪು–605)" ತಾಂಬೂಲ–ಪರ್ಣಮ್ ಪಾನ ಇತಿ ಭಾಷಾ ।**

ಅಸ್ಯಗುಣಾ : ಕಟುತ್ವಂ, ತಿಕ್ತತ್ವಂ, ಉಷ್ಣತ್ವಂ, ಮಧುರತ್ವಂ ಕ್ಷಾರತ್ವಂ ಕಷಾಯತ್ವ ವಾತಕೃಮಿಕಫದುಃಖದೋಷನಾಶಿತ, ಕಾಮಾಗ್ನಿಸಂದೀಪನತ್ವಂ, ಸ್ತ್ರೀ ಸಂಭಾಷಣ ಭೂಷಣತ್ವ, ಧೃತಿವಕ್ತ್ರಪಾಟವೋತ್ನಿಹಿಕಾಂತಿಕಾರಿತ್ವಂ, ಸುಪ್ತೋತ್ಥಿತೇ ಭುಕ್ತೇ ಚ ಶಸ್ತತ್ವಂ, ದಂತಾಸ್ಯದೃಗ್ಗದೇ, ತ್ಯಾಜ್ಯತ್ವಂ, ಸ್ವರ್ಗೇಽಪಿ ದುರ್ಲಭತ್ವಂ ಚ। ಇತಿರಾಜ ವಲ್ಲಭಃ

**4) ಏಲಾಲವಂಗ ಕರ್ಪೂರ ಕಸ್ತೂರಿ ಕೇಸರಾದಿಭಿ : ಜಾತಿಫಲದಲ್ಯೆ : ಪೂಣ್ಕೈರ್ಲಾಂಗೂಲ್ಯ ಷಣನಾಗರೈ ಚೂರ್ಣೈ, ಖದಿರಸಾರೈಶ್ಚ ಯುಕ್ತಾ ಕರ್ಪೂರವೀಟಿಕಾ (ತಾ.ಮಂ)**

ಎಲಕ್ಕಿ, ಲವಂಗ, ಕರ್ಪುರ, ಕಸ್ತೂರೀ, ಕೇಸರಾದಿ, ಜಾತಿಫಲ, ಅಡಿಕೆಪುಡಿ, ಮೆಣಸು, ಶುಂಠಿ, ವೀಳ್ಯದಎಲೆ ಸುಣ್ಣ, ಕಾಚು ಮತ್ತು ಕರ್ಪೂರ ಈ ಪದಾರ್ಥಗಳನ್ನು ಸೇರಿಸಿ ಪಾನವಿಡಿಯನ್ನ ತಯಾರಿಸಬೇಕು.

**5) ಸ್ಕಾಂದೇ ಶ್ರಾವಣಮಹಾತ್ಮೇ ಚೂಡಾಮಣೌ ॥**

**6) ತಾಂಬೂಲಪತ್ರಾಣಿಹರಂತಿ ವಾತಂ**

ಪೌಗಂ ಫಲಂ ಹಂತಿ ಕಫಂ ಚ ಹೃದ್ಯಮ್ ।
ಚರ್ಣಂ ನಿಹನ್ಯಾತ್ ಕಫವಾತ ಮುಚ್ಚೈಃ
ಹನ್ಯಾಚ್ಚ ಪಿತ್ತಂ ಖದಿರಸ್ಯ ಸಾರಃ । ತಾಂ.ಮಂ–1

**7) ತಾಂಬೂಲ ಸೇವನೆಯ ವೈಜ್ಞಾನಿಕ ಪ್ರಯೋಜನಗಳು**

2000 ಸಾವಿರ ವರ್ಷಗಳ ಹಿಂದಿನ ಇತಿಹಾಸವನ್ನು ಹೊಂದಿದ್ದು, ಶ್ರೀಲಂಕಾದ "ಮಹಾವಸ್ಮ" ಪಾಳಿಭಾಷೆಯಲ್ಲಿದೆ.

1) ಮೂತ್ರವಿಸರ್ಜನೆಗೆ ತೊಂದರೆಯಾದಾಗ ಎಲೆ+ಹಾಲು ಸೇರಿಸಿ ಸೇವಿಸಬೇಕು
2) ಉರಿಯೂತ, ಸಂಧಿವಾತ, ವೃಷಣಗಳ ಸಮಸ್ಯೆಗೆ ಪರಿಹಾರ.
3) ಬೆನ್ನು ನೋವುಗಳನ್ನು ಕಡಿಮೆ ಮಾಡುತ್ತದೆ. ಎಣ್ಣೆ+ಎಲೆರಸ ಲೇಪನಮಾಡಬೇಕು.
4) ಸ್ತನದ ಹಾಲು ಸ್ರವಿಸುವಿಕೆ ಎಣ್ಣೆ + ಎಲೆರಸ ಸೇರಿಸುವುದು ಮತ್ತು ಲೇಪನ ಮಾಡಬೇಕು
5) ಉಸಿರಾಟದ ತೊಂದರೆ ಸಾಸಿವೆ ಎಣ್ಣ + ಜೇನು, ತುಪ್ಪ + ಎಲೆರಸ ಸೇವಿಸಬೇಕು.
6) ಮಧುಮೇಹ ವಿರೋಧಿಗುಣ ಇದರಲ್ಲಿದೆ.
7) ನರಗಳ ದೌರ್ಬಲ್ಯವನ್ನು ಕಡಿಮೆ ಮಾಡುತ್ತದೆ.
8) ತಲೆನೋವು ಕಡಿಮೆ ಮಾಡುತ್ತದೆ.
9) ಮಲಬದ್ಧತೆ ಕಡಿಮೆ ಮಾಡುತ್ತದೆ.
10) ಗಾಯಕ್ಕೆ ಪರಿಹಾರ ನೀಡುತ್ತದೆ. ಎಲೆಯನ್ನು ಬಿಸಿಯೂಟ ಗಾಯವಾದ ಸ್ಥಳಕ್ಕೆ ಲೇಪನ ಮಾಡಬೇಕು.

**8) ತಾಂಬೂಲ ಚರ್ವಣವೆಂಬುದು ಅಷ್ಟಭೋಗಗಳಲ್ಲಿ ಒಂದು. ಅದೊಂದು ಸದಾಚಾರವಾಗಿದೆ.**

ವಾಮಹಸ್ತೇನ ನೋ ಖಾದೇತ್ ಸ್ತ್ರೀ ಹಸ್ತೇನ ತಥೈವ ಚ
ಯದಿ ಖಾದಯೇತೇ ಮೂಢಃ ತಸ್ಯ ಲಕ್ಷ್ಮೀರ್ವಿನಸ್ಯತಿ ॥
ತಾಂ.ಮಂ – 30

**9) ಪೊಗದ್ವಯೇನ ತಾಂಬೂಲಂ ನದದ್ಯಾತ್ ನ ಚ ಖಾದಯೇತ್।**

ದಾನಂ ತು ನಿಷ್ಫಲಂ ಪ್ರೋಕ್ತಂ ಖಾದನಂ ಪುಣ್ಯನಾಶನಮ್ ॥
ಮುಖವಾಸಶ್ಚ ತಾಂಬೂಲಂ ದರ್ಪಣಂ ಛತ್ರ ಚಾಮರೇ ।
ಪಾದುಕೇ ಚೇತಿ ವಿಜ್ಞೇಯಾಃ ಉಪಚಾರಾಃ ಪರೇ ಬುಧಾಃ ॥
ಸ್ಮೃತಿಗಳು
॥ ತಾಂಬೂಲ ಮಂಜರೀ 56
ಗಲೇ ಉತ್ತರೇ ಲಾಗಲೀ ಜೇಸುಪಾರೀ
ತಯೇ ಜಾಸರೀ ಧರ್ಮಗಂಧಾಸ್ವೀಕಾರೀ ।
ಮುಖೇ ತಾಂಬೂಲಾ ಚರ್ವಣೀ ದಂತಮಾಲಾ
ಸುತ್ಯೆಲೇ ತಥಾಶೀಚ ಗಂಡೂಷ ಫಾಲಾ ॥
ಬಾಯಿಗೆ ದಾಹವಾದರೆ ಧರ್ಮಗಂಧಾ ಔಷಧಿಯನ್ನು ಕುಡಿಯಬೇಕು.

ಮರಾಠಿ ತಾಂ ಮಂ – 57

**10) ತಿಕ್ತಃ ಶುದ್ಧೀಕರೋ ಮೂತ್ರ ಕರಶ್ಲೋನ್ಮಾದಕಾರಕಃ।**

ಪೀನಸಂ ನಾಶಯತ್ಯೇವ ಕರ್ಪೂರ ಪರ್ಣಸಂಜ್ಞಕಃ॥
ಮುರಾ ಗಂಧವತೀ ದೈತ್ಯಾಹೃದ್ಯಾ ಗಂಧಕುಟಾ ಕುಟೀ
ಭೂರಿಗಂಧಾ ಚ ಸುರಭಿರ್ಗಂಧಾದ್ಯಾಃ ಗಂಧಮಾದಿನೀ ॥
ತಾಂಬೂಲ ಕಲ್ಪಸಂಗ್ರಹ

**11) ಪರ್ಣಮೂಲೇ ವಸೇದ್ ವ್ಯಾಧಿಃ ಪರ್ಣಾಗ್ರೇ ಪಾಪಸಂಭವಃ**

ಚೂರ್ಣಪರ್ಣಂ ಹರೇಚ್ಚಾಯುಃ ಸ್ಥಿರಾಬುದ್ಧಿವಿನಾಶಿನೀ।
ತಸ್ಮಾದಗ್ರಂಚ ಮೂಲಂಚ ಸಿರಾಂ ಚ್ಯೆವ ನಿವರ್ಜಯೇತ್

**12) ಸಿಂಹಾದ್ರಿಸಿಂಹ ಚಲನ ಚಿತ್ರದ ಹಾಡು**

ಮಳೆನಾಡ ಅಡಿಕೆ ಮೈಸೂರು (ಹೆಣ್ಣು)
ವಿಳ್ಳೆದೆಲೆ ಬೆರೆತರೆ ಕೆಂಪು
ಪೋರಾ ನೀನು ಪೋರಿ ನಾನು
ಕೂಡಿದರೆ ತಂಪು.
ನಾಲಿಗೆ ಕೆಂಪಾಗಲು ಸುಣ್ಣವ ಬೇಕು
ನಾನು ಕೆಂಪಾಗಲು ನೀನಿರಬೇಕು
ನಿನ್ನ ಪ್ರೀತಿಯ ಹೊದಿಗೆಯ ಬೇಕು
ತಾಂಬೂಲ ವೀಡಾ ತುಟ್ಟಿಗೆ
ಮುತ್ತಿನ ಮುದ್ರೆ ಉಟ್ಟಲು
ಸುಮ್ಮನೆ ಯಾಕೆ ಕಾಡುತ್ತೀಯಾ
ಅಂಬಲಿ ಸವಿದ ನಾಲಿಗೆ
ಮಜ್ಜಿಗೆ ಕುಡಿದ ಬಾಯಿಗೆ ಕರುಣೆ ಸ್ವಲ್ಪ ತೋರುತ್ತೀಯಾ
ಹಾ ಹಾ ಹಾ ಹಾ
ಶಿವತತ್ವರತ್ನಾಕರ ಕ–6 ತರಂಗ–120

**ಆಧಾರ ಗ್ರಂಥಗಳು**

1. ತಾಂಬೂಲ ಮಂಜರೀ – "ಬರೋಡಾ ಓರಿಯಂಟಲ್ ಲೈಬ್ರರಿ" ಹಸ್ತಪ್ರತಿ ಕ್ರಮಾಂಕ 115
2. ತಾಂಬೂಲ ಕಲ್ಪಸಂಗ್ರಹ : ಈ ಹಸ್ತಪ್ರತಿಯ 'ಬಂಗಾಲದ ಏಶಿಯಾಟಿಕ ಸೊಸೈಟಿ ಲೈಬ್ರರಿ, ಕಲ್ಕತ್ತಾ.

3. ಶಾಙಧರಪದ್ಧತಿ: ಬೃಹತ್ಸಂಹಿತಾ, ರಾಜನಿಘಂಟು, ಪ್ರಾಣತೋಷಿನೀ, ಭೋಜನ ಕುತೂಹಲ ತ್ರಿಮಲ್ಲಭಟ್ಟನ ಬೃಹದ್ಯೋಗತರಂಗಣಿ
4. ಮಾನಸೋಲ್ಲಾಸ (ಸೋಮದೇವ, ತಾಂಬೂಲಭೋಗ, ಶಿವತತ್ತ್ವರತ್ನಾಕರ (ಬಸವರಾಜ ಕೆಳದಿ)
5. ಪುರಾಣಗಳಲ್ಲಿ ಸ್ಕಂಧಪುರಾಣ (ನಾಗರಖಂಡ), ವಶಿಷ್ಟ, ಆತ್ರೇಯ, ದೇವಲ ಸ್ಮೃತಿಗಳಲ್ಲಿ ಬಂದಿರುವ ತಾಂಬೂಲದ ವಿಚಾರ.
6. ಶಬ್ದಕಲ್ಪದ್ರುಮ (ಭಾಗ–2 ಪು–605) ತಾಂಬೂಲ–ಪರ್ಣಮ್ ಪಾನಇತಿ ಭಾಷಾ ।